೧೧

ರಾಷ್ಟ್ರಕೂಟರು ಯುದ್ಧಸನ್ನದ್ಧರಾಗಿರಲಿಲ್ಲ. ಮೂರನೇ ಕೃಷ್ಣನ ನಂತರ ಆಡಳಿತದಲ್ಲೂ ಬಿಗಿ ತಪ್ಪಿದ್ದಿತು. ರೈನ್ಯದಲ್ಲಿ ಶಿಸ್ತು ಹಾಳಾಗಿ ಹೋಗಿತ್ತು. ಹಿಂದೆ ಬದುಕಿದ್ದ ಸಾಮ್ರಾಜ್ಯವಾದುದರಿಂದ ಹೇಗೋ ಜೀವ ಹಿಡಿದುಕೊಂಡಿತ್ತು .ರಾಷ್ಟ್ರಕೂಟರ ಸಾಮಂತರಾದ ಗಂಗರು ಇನ್ನೂ ಶಕ್ತಿಸಂಪನ್ನರಾಗಿದ್ದರು. ಎರಡು ಮನೆತನಕ್ಕೂ ಹೆಣ್ಣು ಕೊಟ್ಟು ಹೆಣ್ಣು ತೆಗೆದು ಕೊಂಡು ಶತಮಾನಗೊಳಿಂದಲೂ ನಿಕಟ ಸಂಬಂಧ ನಿದ್ದಿತು. ಗಂಗರ ಮಾರಸಿಂಹ ರಾಷ್ಟ್ರ ಕೂಟರ ಕರ್ಕನಿಗೆ ಬೆಂಗಾವಲಾಗಿ ಇದುವರಿವಿಗೂ ಕಾಪಾಡಿದ್ದನು. ಚಾಲುಕ್ಯರು ಒಳಗೊಳಗೇ ಯುದ್ಧಸನ್ನದ್ಧರಾದುದು ರಾಷ್ಟ್ರಕೂಟರಿಗೂ ಗೊತ್ತಿರಲಿಲ್ಲ. ಅತ್ತಗಂಗರಿಗೂ ಗೊತ್ತಿರಲಿಲ್ಲ . ಚಾಲುಕ್ಯಸೇನೆ ಬಿರುಗಾಳಿಯಂತೆ ಏರಿ ಬರುವುದನ್ನು ಕೇಳಿ ಕರ್ಕ ಶಸ್ತ್ರಭ್ಯಾಸ ಮಾಡಿಸಿ ಉರಿವ ಬಂದನು. ಮನ್ಯಕೇಟವನ್ನು ತೊರೆದು ಒಂದೆರಡು ದಿನ ಪ್ರಾಯಾಣಮಾಡಿ ಚಾಲುಕ್ಯರ ಸೇನೆಗೆ ಎದುರಾದನು.

ಚಾಲುಕ್ಯರ ಸೇನೆಗೆ ಮಹಾಪರಾಕ್ರಮುಯಾದ ನಾಗೆದೇವ ಸೇನಾಧಿಪತಿಯಾದ್ದನು. ಎರುಗುವ ಸಿಡಿಲನ್ನು ಕೈಯಲ್ಲಿ ಹಿಡಿಯಲು ಸ್ವರ್ಧಿಸುವ ಸಾಹಸಿಗಳಿಂದ ಈ ಸೇನೆ ತುಂಬಿಹೋಗಿತು ! ನಾಗದೇವ ವ್ಯೂಹರಚನೆಯಲ್ಲಿ ಪರಿಣತನಾಗಿದ್ದನು. ಸೈನ್ಯ ಚಿಕ್ಕ ದದರೂ ವ್ಯೂಹರಚನೆಯಲ್ಲಿ ಪರಿಣತನಾಗಿದ್ದನು. ಸೈನ್ಯ ಚಿಕ್ಕ ವ್ಯೂಹಚನೆಯಿಂದ ಅದರ ಶಕ್ತಿಯನ್ನು ಇಮ್ಮಡಿಗೊಳಿಸಬಹುದು. ಚಾಣಾಕ್ಷನಾದ ಶಿಲ್ಪಿ ಪರ್ವತವನ್ನೇ ತಳ್ಳಿಬಿಡುವ ಪ್ರಾವಾಹಕ್ಕೆ ಅಡ್ಡಗೋಡೆ ಹಾಕಿ, ಅದರ ಪೂಗರನ್ನು ನಿಲ್ಲಿಸಬಹುದಲ್ಲ !

ರಾಷ್ಟ್ರಕೂಟರ ಸೇನೆ ಸಂಖ್ಯಾಬಲದಿಂದ ಚಾಲುಕ್ಯರಿಗಿಂತ ಎಷ್ಟೋ ಪಟ್ಟು ದೊಡ್ಡದು. ಯುದ್ಧಸಾಮಗ್ರಿಯೂ ತುಂಬಿತುಳುಕುತ್ತಿತ್ತು. ಆದರೆ ಧೀರರಾದ ಸೇನಾನಿಗಳ ಅಭಾವದಿಂದಾಗಿ ರಾಷ್ಟ್ರಕೂಟರ ಸೇನೆ ದುರ್ಬಲವಾಗಿತ್ತು. ಹೇಡಿಯ ಕೈಗೆ ಚಕ್ರಾಯುಧ ಕೊಟ್ಟರೂ ಸೇನೆ ದುರ್ಬಲವಗಿತ್ತು. ಹೇಡಿಯ ಕೈಗೆ ಚಕ್ರಯುಧ ಕೊಟ್ಟರೂ ಪ್ರಯೋಜನವೇನು ? ಚಕ್ರಾಯಧವನ್ನು ಕುಶಲತೆಯಿಂದ ಪ್ರಯೋಗಿಸಿವ ಚಾಕಚಕ್ಯತೆ ಹಣಾಹಣೆಯಾಯಿತು. ಮದಗಜದ ಹಿಂಡುಕಬ್ಬಿನ ತೋಟಕ್ಕೆ ನುಗ್ಗಿ ತೊತ್ತಳದುಳಿದಂತೆ ಚಾಲುಕ್ಯರು. ರಷ್ಟ್ರಕೂಟರನ್ನು ಧ್ವಂಸಮಾಡಿದರು ! ನಾಗದೇವ

ಬಿಲ್ಲು ಹಿಡಿದು ಜೇವೊಡೆದಾಗ ಮೇಘಗರ್ಜನೆಯಾದಂತಾಗಿ ಅವನು ತೂರುವ ಒಂದೊಂದು ಬಾಣವೊ ನಿಡಿಲಿನಂತೆ ಎರಗಿ ತೆಲೆಗಳನ್ನು ಉರುಳಿಸುತ್ತಿತ್ತು. ಒಮ್ಮೊಮ್ಮೆ ಅವನು ಕತ್ತಿ ಶತ್ರುಗಳ ಮೇಲೆ ಬಿದ್ದಾಗ ನೋಡಬೇಕು, ಗರ್ರನ ತಿರುಗುತ್ತ ಮೃತ್ಯುದೇವತೆ ನಾಲಿಗೆಯಾಡಿಸಿ ಕೈಗೆ ಸಿಕ್ಕಿದ್ದನ್ನೆಲ್ಲ ಕಬಳಿಸುವಂತೆ ನಾಗದೇವ ಆನೆಗಳನ್ನೂ. ಕುದುರೆಗಳನ್ನೂ ,ಸೈನಿಕರನ್ನೂ ಕಬಳಿಸುತ್ತಾ ಬಂದನು. ಒಮ್ಮೆಮ್ಮೆ ಸೈನಿಕನನ್ನೇ ಎತ್ತಿ ಕವಣೆಯಂತೆ ಬೀಸಿದರೆ ಆ ಏಟಿಗೆ ಅರೇಳು ಜನ ಉರುಳುತ್ತಿದ್ದರು !

ರಾಷ್ಟ್ರ ಕೂಟರ ಕರ್ಕನನ್ನು ನಾಗದೇವ ಕೊಂದುಹಾಕಿದನು. ನಾಯಕನಿಲ್ಲ ದಂತಾಗಿ ಸೈನಿಕರು ಮಳೆ ಬಂದಾಗ ಓಡುವ ಜನರಂತೆ ದಿಕ್ಕಾಪಾಲಾದರು. ಚಾಲುಕ್ಯರನ್ನು ರ್ರುದ್ದರಿಸುವವರೇ ಉಳಿಯಲಿಲ್ಲ. ರಾಷ್ಟ್ರಕೂಟರ ರಾಜಧಾನಿ ಇವರ ವಶವಾಯಿತು. ಶತಮಾನ ಶತಮಾನಗಳಿಂದ ರಾಶಿಯಾಗಿದ್ದ ಹೊನ್ನೆಲ್ಲ ತೈಪಲನ ಕೈಗೆ ಸಿಕ್ಕಿತು. ಸೈನಿಕರಿಗೆ ಅವರವರು ಹೊರುವಷ್ಟು ದ್ರವ್ಯವನ್ನು ಹಂಚಿದರು.

ರಾಷ್ಟ್ರಕೂಟರ ಮೇಲೆ ಚಾಲಿಕ್ಯರು ಬಿದ್ದುದನ್ನು ಕೇಳಿ ಗಂಗರ ಮಾರಸಿಂಹ ಸೈನ್ಯಸಮೇತ ಹೊರಟುಬಂದನು. ಚಾಮುಂಡರಾಯ ಇನ್ನೆಲ್ಲೊ ಹೋಗಿದ್ದುದರಿಂದ ಮಾರಸಿಂಹನೇ ಹೊರಟುಬರಬೇಕಾಯಿತು. ಆದರೆ ಅವನು ರಾಷ್ಟ್ರಕೂಟರಿಗೆ ನೆರವಾಗುವುದಂತಿರಲಿ ಆ ವೇಳೆಗಾಗಲೇ ರಾಷ್ಟ್ರಕೂಟರ ಗತಿ ಪೊರೈಸಿದ್ದಿತು.ರಾಷ್ಟ್ರದ ಹಿರಿಯರು ರಾಜುಕುಮಾರನನ್ನು ಗುಪ್ತದ್ವಾರದಲ್ಲಿ ಕರೆದುಕೊಂಡು ಪಲಾಯನವೆಸಗಿದ್ದರು. ದಾರಿಯಲ್ಲಿ ತಬ್ಬಲಿಯಾದ ರಾಷ್ಟ್ರಕೂಟ ರಾಜುಕುಮಾರನನ್ನು ಕಂಡು ಮಾರಸಿಂಹನ ಕರುಳು ನುಲಿಚಿದಂತಾಯಿತು. ಊರೆಲ್ಲ ಹಾಳಾದಮೇಲೆ ಊರುಬಾಗಿಲು ಹಾಕಲು ತಾನು ಬಂದಂತಾಯಿತಲ್ಲ ಎಂದು ಮಾರಸಿಂಹ ಕೈ ಕೈ ಹಿಸುಕಿಕೊಂಡುನು.

ಸಿಂಹದಂತೆ ಗರ್ಜಿಸಿ ಮಾರಸಿಂಹ ಚಾಲುಕ್ಯರನ್ನು ಎದುರಿಸಿದನು. ನಾಗದೇವನಿಗೆ ಮಾರಸಿಂಹನೊಡನೆ ಹೋರಾಡುವುದೇ ಒಂದು ಆನಂದ. ತಾನು ಸಾಹಸಿಯಾದುದು ಸಾರ್ಥಕವಯಿತೆಂದು ಹಿಗ್ಗಿದನು. ತನ್ನ ವ್ರತ ಫಲಿಸಿತೆಂದು ನಲಿದನು. ಉತ್ತರನ ಮೇಲೆ ಹೋರಾಡಿ ಗೆಲಿಯುವುದಕ್ಕಿಂತ ಅರ್ಜುನನ ಮೇಲೆ ಹೋರಾಡಿ ಸೋಲುವುದು ಕೀರ್ತಿಪದವೆಂದು ನಾಗದೇವ

ಎದುರಿಸಿದನು. ಭೀಷ್ಮನಿದಿರು ಅಭಿಮನ್ಯು ಎದೆತಟ್ಟಿ ನಿಂತಂತೆ ಮಾರಸಿಂಹನಿದಿರು ಇವನು ಖಡಾಖಾಡಿಗಿಳಿದನು. ನಾಗದೇವನ ಜೇವೊಡೆದ ದೇಹವನ್ನು ನೋಡುವುದೇ ಮಾರಸಿಂಹನಿಗೆ ಒಂದು ಆನಂದ. ನಗದೇವ ತೊಡೆತಟ್ಟಿದನೆಂದರೆ ಗುಂಡುಗುಂಡನ್ನು ಅಪ್ಪಳಿಸಿಂದಂತಾಗುತ್ತಿತ್ತು. ಮಾರಸಿಂಹ ಮಲ್ಲಗಾಳಗಕ್ಕೆ ಬಂದನು. ನಾಗದೇವ ತಾನೂ ಸಿದ್ಧವೆಂದನು. ಚಣಕಾಲ ಇಬ್ಬರೂ ಕಣ್ಣಲ್ಲೇ ಎದುರಾಳಿಯ ಸಾಹಸವನ್ನು ಅಳೆದುನೋಡಿದರು. ಭರತ ಬಾಹುಬಲಿಗಳು ದೃಷ್ಟಿ ಯುದ್ಧಮಾಡುವಂತೆ ಇಬ್ಬರೂ ಕೆಂಗೆಣ್ಣಿನಲ್ಲಿ ಕಿಡಿಗಾರಿದರು. ಬಬ್ಬನನ್ನು ಇನ್ನೊಬ್ಬ ಹಿಡಿಯಲು ಹೊಂಚುಹಾಕಿದರು. ಎರಡು ಗೂಳಿಗಳು ಕೊಂಬುಗಳಿಂದ ತಿವಿದಾಡುವಂತೆ ಇವರು ಗದೆಗಳನ್ನು ತಾಕಾಡಿದರು.ಕೊನೆಗೆ ಮಾರಸಿಂಹ ಸಿಂಹದಂತೆ ನಾಗದೇವನ ಮೇಲೆ ಎರಗಿ ಅವನನ್ನು ಬಾಚಿ ಮೇಲಕ್ಕೆ ಎಸೆದನು. ನಾಗದೇವ ಖೇಚರನಂತೆ ಮೇಲೆಹೋಗಿ ಗಾಳಿಪಟ ಗೋತಹೊಡೆಯುತ್ತ ಬರುವಂತೆ ಬೀಳುವಾಗ ಮಾರಸಿಂಹ ಅವನನ್ನು ಪಕ್ಕನೆ ಹಿಡಿದುಕೊಂಡು ನೆಲಕ್ಕೆ ಕುಕ್ಕಿದನು. ನಾಗದೇವನಲ್ಲಿ ಜ್ವಾಲಾಮುಖಿಕೆದರಿದಂತಾಗಿ ಮಾರಸಿಂಹನ ಮೇಲೆ ಬಿದ್ದನು. ಅವನನ್ನು ಎರಡು ಕೈಯಲ್ಲೂ ಬಲವಾಗಿ ಹಿಡಿದು ಗರತಿಪ್ಪಾಳೆ ಆಡಿಸುವಾಗ ಪರ್ವತವನ್ನು ಇನೊಂದು ಪರ್ವತ ರಪರಪರಾಟೆ ತಿರುವುತ್ತಿರುವಂತೆ ಭಯಾನಕವಾಯಿತು. ಎರಡುಕಡೆಯ ಸೇನೆಯೂ ಬೆಪ್ಪಾಗಿ ಇವರ ಸಾಹಸವನ್ನು ನೋಡುತ್ತ ನಿಂತುಕೊಂಡಿತು !

ನಾಗದೇವನನ್ನು ಕೊಲ್ಲಲು ಮಾರಸಿಂಹನಿಗೆ ಇಷ್ಟವಿಲ್ಲವೊ ಅಥವ ಮಾರಸಿಂಹ ನನ್ನು ಪೂರೈಸಲು ನಾಗದೇವನಿಗೆ ಇಷ್ಟವಿಲ್ಲವೊ ಯಾರಿಗೆ ಗೊತ್ತು ಎಂದು ಸೇನಾನಿಗಳೆಲ್ಲ ಬೆರಗಾಗಿ ಹೋದರು. ಕೇವಲ ಸಾಹಸ ಪ್ರದರ್ಶನಕ್ಕಾಗೇ ಇವರಿಬ್ಬರೂ ಹೋರಾಡುವಂತಿತ್ತು. ಬಬ್ಬರನ್ನೊಬ್ಬರು ಕೊಲ್ಲಬಹುದಾದ ಸಂದರ್ಭಗಳು ದೊರೆತರೂ ಆಗ ಬಬ್ಬನಿಗೆ ಇನ್ನೊಬ್ಬ ಪ್ರಾಣದಾನ ಮಾಡಿ ಕೇಕೆ ಹೊಡೆಯುತ್ತ ಹೋರಾಡಿದರು ! ರಾಷ್ಟ್ರಕೂಟರ ಸೇನಾನಿ ಈ ಸಂದರ್ಭದಲ್ಲಿ ಪ್ರತೀಕಾರ ತೀರಿಸಿಕೊಳ್ಳಬೇಕೆಂದು ಮರದ ಮೇಲಿಂದ ಗುರಿಯಿಟ್ಟು ಈಟ್ಟಿಯನ್ನು ನಾಗದೇವನ ವಕ್ಷಸ್ಥಳಕ್ಕೆ ಬೀಸಿದನು. ಸಿಡಿಲೆರಗುವಂತೆ ಅದು ನಾಗದೇವ ಹೃದಯಕ್ಕೆ ಎರಗಿತು.ನಾಗದೇವ ಲಕ್ವ ಹಿಡೆದವನಂತೆ ದೊಪ್ಪನೆ ಉರುಳಿದನು ! ಮಾರಸಿಂಹ ಪಕ್ಕನೆ ಬಂದು ಅವನನ್ನು ಬಾಚಿ ಅಪ್ಪಿಕೊಂಡು

ಗೋಳಾಡಿದನು. ಆಕಸ್ಮಿಕವಾಗಿ ಆದ ಅನ್ಯಾಯಕ್ಕಾಗಿ ಮಮ್ಮಲ ಮರುಗಿದನು.ಮತ್ತೆಮತ್ತೆ ಬಿಕ್ಕಳಿಸಿ ಅತ್ತನು. ಕ್ರಮೇಣ ಅವನಿಗೆವೈರಾಗ್ಯಭಾವನೆ ಉತ್ಪನ್ನವಾಯಿತು. ತನ್ನಿಂದಾಗಿ ನಾಗದೇವ ಇಂಥ ಮರಣಕ್ಕೆ ಗುರಿಯಾದನಲ್ಲಾ ಎಂಬ ಪಶ್ಚಾತ್ತಾಪದಿಂದ ಬೆಂದು ಹೋದನು . ಅದಕ್ಕೆ ತಕ್ಕ ಪ್ರಾಯಶ್ಚಿತ್ತವೆಂದರೆ ತಾನೂಸಾವನ್ನು ಸಮೀಪಿಸುವುದು !ಆದುದರಿಂದ ಆ ಕೊಡಲೇ ಸಲ್ಲೇಖನ ವ್ರತವನ್ನು ಬಂಕಾಪುರದಲ್ಲಿ ಸ್ವೀಕರಿಸಿದನು !! ಕಾಲಲಬ್ಧಿ ಕೂಡಿ ಬಂದು ಮಾರಸಿಂಹನಿಗೆ ನಾಗದೇವ ಸಾವು ನೆಪವಾಯಿತು. ಅಷ್ಟೆ.